# ಆರದಿರಲಿ ಬೆಳಕು

■ ಸುಧೀರ್ ಪೊಸಿತ್ಲು

ಹದಿನೈದು ದಿನಗಳಿಂದ ಕಂಪನಿಯ ಕೆಲಸದ ಮೇಲೆ ಯುರೋಪ್‌ಗೆ ಬಂದಿದ್ದವನು ಇಟಲಿಯಲ್ಲಿ ಸುತ್ತತೊಡಗಿದ್ದೆ. ಇಟಲಿಯ ಫ್ಲೋರೆನ್ಸ್ ಹಾಗೂ ಮಿಲಾನ್ ನಗರಗಳ ಓಡಾಟ ಅತ್ಯಂತ ಮುದಭರಿತ. ಇತಿಹಾಸ ಹಾಗೂ ಆಧುನಿಕ ತಂತ್ರಜ್ಞಾನದ ಸಂಪೂರ್ಣ ಮಿಶ್ರಣ ಇಟಲಿ. ಮಿಲಾನ್ ನಗರದಲ್ಲಿದ್ದ ಒಂದು ಕಸ್ಟಮರ್ ಮೀಟಿಂಗ್ ಮುಗಿಸಿ ಫಾಸ್ಟ್ ಟ್ರೈನ್‌ನಲ್ಲಿ ಫ್ಲೋರೆನ್ಸ್ ನಗರ ತಲುಪಿ, ಹೋಟೆಲ್ ಮಾಡಿಕೊಂಡು, ಬಿಸಿ ಬಿಸಿ ನೀರಿನಲ್ಲಿ ಮಿಂದು ಉಲ್ಲಸಿತನಾಗಿ, ಹೋಟೆಲ್‌ನ ವೈಫೈ ಕನೆಕ್ಟ್ ಮಾಡಿಕೊಂಡು, ವಾಟ್ಸಾಪ್ ಕಾಲ್ ಮಾಡಿ ಸಮಾಧಾನಗೊಂಡೆ. ಪ್ರತಿ ದಿನದಂತೆ ನನ್ನ ಹೆಂಡತಿ ಚಾರ್ವಿಯ ಮಾತು ಒಂದೇ ಧಾಟಿಯದು – ಏನು ತಿಂಡಿ, ಏನು ಊಟ? ಸಮಾಧಾನ ಆಗುತ್ತಾ, ಅದು ಹೇಗೆ ಬ್ರೆಡ್ಡು, ಹಣ್ಣು, ಪಿಜ್ಜಾ, ಪಾಸ್ತಾಗಳಲ್ಲಿ ಸಮಾಧಾನ ಆಗುತ್ತೋ? ಆರೋಗ್ಯ ಚೆನ್ನಾಗಿ ನೋಡಿಕೊಳ್ಳಿ. ಹಿಮ ಬೀಳತ್ತೆ ಅಂತೀರ. ಬೆಚ್ಚಗೆ ಬಟ್ಟೆ ಹಾಕಿಕೊಳ್ಳಿ. ಕೆಲಸ ಮುಗಿದ ಕೂಡಲೇ ಹೊರಟು ಬನ್ನಿ... ಇವೇ ಪ್ರತಿದಿನದ ವಾರ್ತಾಲಾಪ. ನನ್ನದು ಕೆಲವೇ ಮಾತು. 'ನೀನು, ಮಕ್ಕಳು ಎಲ್ಲಾ ಆರಾಮ? ಊರಿಂದ ಏನಾದರೂ ಫೋನ್ ಬಂದಿತ್ತಾ' – ಕೇಳಿದರೆ ಮುಗಿದೇಹೋಯಿತು. ಇನ್ನೆಲ್ಲಾ ಚಾರ್ವಿಯದೇ ಮಾತು. ಹದಿನೈದು ನಿಮಿಷದ ಮಾತು ಮುಗಿದರೆ ಆ ದಿನದ ಕಮಿಟ್ಮೆಂಟ್ ಮುಗಿದಹಾಗೆ.

ಎಂದಿನ ದುರಭ್ಯಾಸದಂತೆ ವಾಟ್ಸಾಪ್ ಮೆಸೇಜ್‌ಗಳನ್ನು ನೋಡಲು ಸ್ಕ್ರಾಲ್ ಡೌನ್ ಮಾಡುತ್ತಾ ಹೋದೆ. ಒಮ್ಮೆಲೆ ಕಂಡಿದ್ದು ಶಂಕರನ ಹೆಸರಲ್ಲಿದ್ದ ಮೆಸೇಜ್, ಮಿಸ್ಡ್ ಕಾಲ್ ಹಾಗೂ ವಾಯ್ಸ್ ಮೆಸೇಜು. 'ಮಾತಾಡೋಕೆ ಅಂತ ಎರಡು ದಿನದಿಂದ ಫೋನ್ ಮಾಡ್ತಾನೆ ಇದೀನಿ. ನಿನ್ನ ಮೊಬೈಲ್ ಸ್ವಿಚ್ ಆಫ್ ಬರ್ತಿದೆ' ಅನ್ನುವ ಅರ್ಥ ಬರುವ ಮೆಸೇಜ್‌ಗಳು. ಅದರ ಮೇಲೆ ವಾಯ್ಸ್ ಮೆಸೇಜ್ ಬೇರೆ. 'ಪ್ರಮೋದ್ ತಕ್ಷಣ ಫೋನ್ ಮಾಡು. ನಿನ್ನ ಹತ್ತಿರ ಮಾತಾಡ್ಬೇಕು' ಅಂತ ಹೇಳುವ ಧ್ವನಿ.

ಅಂತರರಾಷ್ಟ್ರೀಯ ರೋಮಿಂಗ್ ತುಂಬಾ ದುಬಾರಿ ಅನ್ನುವ ಕಾರಣಕ್ಕೆ ನನ್ನ ಭಾರತದಲ್ಲಿ ಉಪಯೋಗಿಸುವ ನಂಬರ್ ಆಫ್ ಇಟ್ಟಿರ್ತೇನೆ. ಕಂಪನಿಯವರು ವಿದೇಶಕ್ಕೆ ಬಂದಾಗ ಇಲ್ಲಿನ ಲೋಕಲ್ ಸಿಮ್ ಕಾರ್ಡ್ ಕೊಟ್ಟಿರ್ತಾರೆ. ಸಾಮಾನ್ಯವಾಗಿ ಆ ಟೆಂಪರರಿ ನಂಬರನ್ನು ಹತ್ತಿರದ ಸಂಬಧಿಕರಿಗೆ ಕೊಟ್ಟಿರುತ್ತೇನೆ. ಒಂದು ಕ್ಷಣ ಮೈ ಜುಂ ಅನ್ನಿಸಿ, ಎದೆ ಹೊಡೆದುಕೊಳ್ಳೋಕೆ ಶುರುವಾಯಿತು. ಊರಲ್ಲಿ ಅಪ್ಪ ಅಮ್ಮ ಆರಾಮ ಇದಾರೆ ತಾನೆ? ಈಗಷ್ಟೆ ಚಾರ್ವಿ ಹತ್ತಿರ ಮಾತಾಡಿದ್ನಲ್ಲ. ಏನು ಹೇಳಲಿಲ್ಲ. ಮೊನ್ನೆ ಅಮ್ಮನಿಗೆ ಫೋನ್ ಮಾಡಿ ಮಾತಾಡಿದ್ದೆ. ಸಮಾಧಾನ ಆಗಲಿಲ್ಲ. ತಕ್ಷಣ ದಾವಣಗೆರೆಯಲ್ಲಿರೋ ಅಮ್ಮನ ನಂಬರಿಗೆ ಕರೆ ಮಾಡಿದೆ. ಅಮ್ಮ ಎತ್ತಿಕೊಂಡವಳೇ 'ಯಾಕಿಷ್ಟು ಗಾಬರಿಯಲ್ಲಿದಿಯ? ಹನ್ನೊಂದುವರೆ ಆಗಿದೆ. ಹೆದರಿಕೆ ಆಯ್ತಪ್ಪ ನಂಗಂತೂ. ನೀನು ಆರಾಂ ಇದೀಯ ತಾನೆ' ಅಂತ ನನ್ನನ್ನೇ ಕೇಳಿದಳು. ಅವರೆಲ್ಲಾ ಕ್ಷೇಮ ಅಂತ ತಿಳಿದು ಸಮಾಧಾನಗೊಂಡೆ. ಗಡಿಯಾರದಲ್ಲಿ ಎಂಟು ಗಂಟೆ. ಅಂದರೆ ಭಾರತದಲ್ಲಿ ಈಗ ಹನ್ನೊಂದವರೆ ಅಲ್ವ ಅನ್ನಿಸಿ ಸುಮ್ಮನಾದೆ. ಇಷ್ಟು ಹೊತ್ತಲ್ಲಿ ಶಂಕರನಿಗೆ ಏನು ಫೋನ್ ಮಾಡೋದು. ನಾಳೆ ನೋಡೋಣ ಅಂದುಕೊಂಡೆ. 'ನಾನೀಗ ಇಟಲಿಯಲ್ಲಿದ್ದೀ ಶಂಕರ. ಅದಕ್ಕೆ ನಿಂಗೆ ಫೋನ್ ಸಿಕ್ಕಿಲ್ಲ. ಈ ವಾರದ ಕೊನೆಗೆ ಬೆಂಗಳೂರಿಗೆ ಬರ್ತೀನಿ. ಆವಾಗ ಫೋನ್ ಮಾಡ್ತೀನಿ' ಅಂತ ಮೆಸೇಜ್ ಕಳಿಸಿ ಕೆಳಗಿನ ರೆಸ್ಟಾರೆಂಟ್‌ಗೆ ಊಟಕ್ಕೆ ಹೊರಟೆ.

ಶಂಕರನ ಧ್ವನೀನಾ ನಾನು ವಾಯ್ಸ್ ಮೆಸೇಜ್‌ನಲ್ಲಿ ಕೇಳಿದ್ದು ಅನ್ನಿಸಿ ಅನುಮಾನಗೊಂಡೆ. ಧ್ವನಿ ಶಂಕರನದ್ದೇ. ಆದರೆ, ಚಿಕ್ಕ ಮಕ್ಕಳಂತೆ ದುಃಖಿಸಿ ಅಳುವ ಧ್ವನಿ, ಶಂಕರ ಹೀಗೆ ಅಳೋಕೆ ಸಾಧ್ಯವಾ?

ನನಗೆ ತಿಳಿವಳಿಕೆ ಬಂದಾಗಿನಿಂದ ಶಂಕರ ಸ್ನೇಹಿತ. ಅಮ್ಮನ ಕಡೆ ದೂರದ ಸಂಬಂಧಿ. ನನಗಿಂತ ಒಂದು ವರ್ಷ ವಯಸ್ಸಿನಲ್ಲಿ ದೊಡ್ಡವನಿರಬಹುದು. ಹೈಸ್ಕೂಲ್‌ವರೆಗೆ ಒಟ್ಟಿಗೆ ಓದಿದ್ದು. ಆಮೇಲೆ ಅವನು ಓದಲಿಲ್ಲ. ವಿದ್ಯಾಭ್ಯಾಸ ಮುಗಿಸಿ ನಾನು ಬೆಂಗಳೂರಿಗೆ ಬಂದು ನೌಕರಿ ಹಿಡಿದೆ. ಮದುವೆ ಮಕ್ಕಳು ಅಂತ ಎಲ್ಲಾ ಆಗಿ ನನ್ನ–ಅವನ ಜೀವನದ ದಾರಿಗಳೇ ಬೇರೆ ಬೇರೆ ಆಗಿವೆ. ಅಷ್ಟು ಸುಲಭವಾಗಿ ಯಾರೊಂದಿಗೂ ಹೊಂದಿಕೊಳ್ಳದ, ಯಾವ ಸ್ನೇಹಿತರನ್ನೂ ಹೆಚ್ಚಾಗಿ ಹಚ್ಚಿಕೊಳ್ಳದ ಶಂಕರ ನನ್ನ ಜೊತೆ ಚೆನ್ನಾಗಿರುತ್ತಿದ್ದ. ರಜೆ ಬರಲಿ, ಶಾಲೆ ಇರಲಿ,

